ದಿನಾಂಕ 02.06.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ 8 ನೇ ಪ್ರತಿವಾದಿ ಪರ ವಕೀಲರಿಂದಃ**

ದಿನಾಂಕ 01.06.2008 ರ ನೊಂದಾಯಿತವಲ್ಲದ, ದಂಡ ಮತ್ತು ಶುಲ್ಕವನ್ನು ಪಾವತಿಸಲ್ಪಟ್ಟ ಮೂಲ ದಾನ ಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ನಿಡಿ-73 ಎಂದು ಗುರುತಿಸಲಾಯಿತು. ಸದರಿ ದಾನ ಪತ್ರದಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸಹಿಯನ್ನು ನಿಡಿ-73(ಎ) ಎಂದು ಗುರುತಿಸಲಾಯಿತು. ಸದರಿ ದಾನ ಪತ್ರದಲ್ಲಿ ನನಗೆ ದಾನ ನೀಡಿದವರಾದ ಅಲ್ತಾಫ ಹುಸೇನ, ಜಾವೆದ ಹುಸೇನ ಮತ್ತು ಸಾದಿಕ ಹುಸೇನ ರವರ ಸಹಿಗಳು ಇರುತ್ತವೆ. ಸದರಿ ಸಹಿಗಳನ್ನು ಕ್ರಮವಾಗಿ ನಿಡಿ-73(ಬಿ) ರಿಂದ 73(ಡಿ) ಎಂದು ಗುರುತಿಸಲಾಯಿತು. ಸದರಿ ದಾನ ಪತ್ರದಲ್ಲಿ ಸಾಕ್ಷಿದಾರರಾದ ಇಪ್ತಿಕಾರ ಹುಸೇನ ಮತ್ತು ಅಬ್ದುಲ ರಹೆಮಾನ ರವರ ಸಹಿಗಳು ಇರುತ್ತವೆ. ಸದರಿ ಸಹಿಗಳನ್ನು ಕ್ರಮವಾಗಿ ನಿಡಿ-73(ಇ) ಮತ್ತು 73(ಎಫ್) ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ವಾದಿ ಮತ್ತು ಅವರ ಪರ ವಕೀಲರು ಗೈರುಹಾಜರಿರುತ್ತಾರೆ ಆದರೂ ಸಹ ಪಾಟಿ ಸವಾಲಿಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ